**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಓಎಸ್ ನಂ. 303/2022**

ಡಿಡಬ್ಲ್ಯೂಃ 1

**ದಿನಾಂಕಃ09.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಆರ್ ಎಲ್ ರವರಿಂದಃ**

ನನಗೆ ಓದಲು ಬರುವುದಿಲ್ಲ. ಕೃಷ್ಣೋಜಿ ರಾವ್ ಬಿನ್ ಛತ್ರೋಜಿ ಪಿಳ್ಳಪ್ಪ ರಾವ್ ನನ್ನ ತಂದೆ. ನನ್ನ ತಂದೆಯ ಹೆಸರಿನಲ್ಲಿ ಸರ್ವೆ ನಂಬರ್ 19 ಇದೆ ಎಂದರೆ ಸರಿ ಎಂದು ಒಪ್ಪಿಕೊಂಡ ಮೇರೆಗೆ ಅದನ್ನು ನಿಪಿ 10 ಎಂದು ಗುರುತಿಸಲಾಯಿತು. ಸರ್ವೆ ನಂಬರ್ 17/1 ನನ್ನ ತಂದೆಯ ಹೆಸರಿನಲ್ಲಿದೆ ಎಂದು ಪಹಣಿ ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡ ಮೇರೆಗೆ ಅದನ್ನು ನಿಪಿ11 ಎಂದು ಗುರುತಿಸಲಾಯಿತು. ಈ ಹಿಂದೆ ವಿಭಾಗಕ್ಕಾಗಿ ಸಲ್ಲಿಸಲಾದ ದಾವೆಯಲ್ಲಿ ಸರ್ವೆ ನಂಬರ್–19 ಮತ್ತು ಸರ್ವೆ ನಂಬರ್ 17/1 ಅನ್ನು ಸೇರಿಸಿರುವುದಿಲ್ಲ. ವಾದಿ ಹಳೆ ಸರ್ವೆನಂಬರ್ 20 ಹೊಸ ಸರ್ವೆನಂಬರ್ 20/4 –ಪಿ1, 4 ಎಕರೆಗೆ ಈ ದಾವೆ ಹಾಕಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿ ರೇಷ್ಮೆ ಸೊಪ್ಪು ಮತ್ತು ಮಾವಿನ ತೋಪು ಹಾಕಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಮಾವಿನ ತೋಪು ನಮ್ಮದೆಂದು ನುಡಿದಿರುತ್ತಾರೆ.

ಪೂರ್ವಕ್ಕೆ ಭಜಂತ್ರಿ ಮುನಿವೆಂಕಟಪ್ಪ, ಪಶ್ಚಿಮಕ್ಕೆ ರಾಜಕಾಲುವೆ ನಂತರ ಎಳಚೇಪಲ್ಲಿ ಪಿಳ್ಳಪ್ಪ, ಉತ್ತರಕ್ಕೆ ಸರ್ಕಾರಿ ಕಾಲುವೆ, ದಕ್ಷಿಣಕ್ಕೆ ಅಶ್ವತ್ಥನಾರಾಯಣಗೌಡ ಈ ಚೆಕ್ಕುಬಂದಿಯಲ್ಲಿ ವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಾವಾಸ್ವತ್ತು ವಾದಿಯ ತಂದೆ ಅಪ್ಪೋಜಿರವರಿಗೆ ದರಕಾಸ್ತಿನಲ್ಲಿ ಮಂಜೂರಾಗಿದೆ ಎಂದರೆ ಸರಿ. ಮಂಜೂರಾತಿಯ ನಂತರ ವಾದಿಯ ತಂದೆಯ ಹೆಸರಿಗೆ ಖಾತೆಯಾಗಿದ್ದು, ಅವರೇ ಸ್ವಾಧೀನದಲ್ಲಿದ್ದು, 1970 ರಲ್ಲಿ ಮೊಹಮದ್ ಶಫೀವುಲ್ಲಾರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಕ್ರಯ ಪತ್ರದ ಆಧಾರದ ಮೇಲೆ ಮೊಹಮದ್ ಶಫೀವುಲ್ಲಾರವರ ಹೆಸರಿಗೆ ಖಾತೆ ಬದಲಾವಣೆ ಆಗಿ ಅವರೇ ಸ್ವಾಧೀನಲ್ಲಿದ್ದಾರೆ ಎಂದರೆ ಗೊತ್ತಿಲ್ಲ. 1980 ರಲ್ಲಿ ವಾದಿ ಮೊಹಮದ್

ಶಫೀವುಲ್ಲಾರವರಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಖರೀದಿ ಮಾಡಿದ ದಿನದಿಂದ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ನನಗೆ ಮತ್ತು ನಮ್ಮ ಕುಟುಂಬದವರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಸ್ವಾಧೀನ ಇಲ್ಲದಿದ್ದರೂ ದಿಃ 10.06.2022 ರಂದು ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ವಿಚಾರ ನನಗೆ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಾ ಎಂದರೆ ನಾನು ಓದಿಲ್ಲದ ಕಾರಣ ಗೊತ್ತಿಲ್ಲ. ದಾವೆಯ ಬಗ್ಗೆ ಮತ್ತು ದಾವಾ ಸ್ವತ್ತಿನ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/–

(ಶ್ರೀಮತಿ ರೋಹಿಣಿ. ಡಿ)

1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು